ಸಿ.ಸಿ ನಂಃ 20418/2020

ಚಾಸಾಃ 1, ಪ್ರಾಸಾಃ 1

**ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ**

**ಸಿ.ಸಿ ನಂಃ 20418/2020**

ಸಾಕ್ಷಿದಾರರ ಹೆಸರುಃ ಇಮ್ರಾನ್ ಪಾಷ

ತಂದೆಯ ಹೆಸರುಃ ಅಮಾನ್ ಉಲ್ಲ ಶರೀಫ್

ವಯಸ್ಸುಃ 32 ವರ್ಷ

ಉದ್ಯೋಗಃ ಖಾಸಗಿ ಕೆಲಸ

ವಾಸಃ ಗುರಪ್ಪನಪಾಳ್ಯ, ಬೆಂಗಳೂರು

**ದಿನಾಂಕಃ 17-04-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಹಿರಿಯ ಸ.ಸ.ಅ ಅವರಿಂದಃ-**

1. ಚಾಸಾ-2 ನನ್ನ ಹೆಂಡತಿ. ಚಾಸಾ-3 ನನ್ನ ಹೆಂಡತಿಯ ಅಕ್ಕ. ಚಾಸಾ-4 ನನ್ನ ತಾಯಿ. ಚಾಸಾ-5 ರಿಂದ 8 ಯಾರೇಂದು ನನಗೆ ಗೊತ್ತಿಲ್ಲ. ಆರೋಪಿ ನನ್ನ ಅತ್ತೆ. ನನಗೆ ಒಟ್ಟು ಐದು ಜನ ಮಕ್ಕಳು. 4 ವರ್ಷದ ಹಿಂದೆ 5ನೇ ಮಗುವಿನ ಜನನಕ್ಕೆ ಚಾಸಾ-2 ರವರು ಆರೋಪಿಯ ಮನೆಗೆ ಹೋಗಿದ್ದಾಗ ನನ್ನ 4ನೇ ಮಗುವಿಗೆ ಜೇನು ಹುಳ ಕಣ್ಣಿನ ಮೇಲೆ ಕಚ್ಚಿತ್ತು ಆದ್ದರಿಂದ ಕಣ್ಣು ಊದಿಕೊಂಡಿತ್ತು. ಆ ಸಮಯದಲ್ಲಿ ನಾನು ಕೆಲಸಕ್ಕೆ ಹೋಗಿದ್ದೆ. ಉಪ್ಪಿನ ಶಾಖವನ್ನು ಕಣ್ಣಿನ ಮೇಲೆ ಕೊಟ್ಟರೆ ಊತ ಕಡಿಮೆಯಾಗುತ್ತದೆ ಎಂದು ದೊಡ್ಡವರು ಯಾರೋ ಹೇಳಿದ್ದರಿಂದ ನನ್ನ ಹೆಂಡತಿ ನನ್ನ ಮಗ ಅರ್ಮಾನ್ ಶರೀಫ್ ಇತನಿಗೆ ಉಪ್ಪಿನ ಶಾಖವನ್ನು

ಕೊಟ್ಟಿದ್ದಾರೆ. ಶಾಖ ಹೆಚ್ಚಾಗಿದ್ದರಿಂದ ಕಣ್ಣಿನ ಬಳಿ ಸುಟ್ಟಂತ ಗಾಯಗಳು ಆಗಿದ್ದವು. ಅಕ್ಕಪಕ್ಕದ ಮನೆಯವರು ಮಗುವಿಗೆ ಈಗೆ ಆಗಿದೆ ಎಂದು ನನ್ನ ಹೆಂಡತಿ ಚಾಸಾ-2 ಮತ್ತು ಆರೋಪಿಯೊಂದಿಗೆ ಜಗಳ ಮಾಡುತ್ತಿರುವುದಾಗಿ ನನಗೆ ಫೋನ್ ಮಾಡಿದರು. ನನಗೆ ಫೋನ್ ಬಂದ ಬಳಿಕ ನಾನು ಕೆಲಸದಿಂದ ಮನೆಗೆ ಬಂದೆ. ಜಗಳ ಮಾಡುತ್ತಿದ್ದವರು ನನ್ನ ಅತ್ತೆಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು ನಂತರ ನಾನು ಸಹ ಪೊಲೀಸ್ ಠಾಣೆಗೆ ಹೋಗಿದ್ದೆ. ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದಾರೆ. ಸದರಿ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ದೂರನ್ನು ತೋರಿಸಿದಾಗ ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಆದ್ದರಿಂದ ದೂರನ್ನು **ನಿಪಿ-1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು.

2. ಸುಟ್ಟ ಗಾಯಗಳಾಗಿದ್ದ ನನ್ನ ಮಗನನ್ನು ಚಾಸಾ-2 ಮತ್ತು ಆರೋಪಿಯು ಇಂದಿರಾಗಾಂಧಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಸದರಿ ಆಸ್ಪತ್ರೆಯಲ್ಲಿ ನನ್ನ ಮಗನಿಗೆ ಒಂದು ವಾರದ ಕಾಲ ಒಳರೋಗಿಯಾಗಿ ಚಿಕಿತ್ಸೆ ಕೊಡಿಸಿರುತ್ತೇನೆ. ಸಾಕ್ಷಿಗೆ ಪಂಚನಾಮೆ ತೋರಿಸಿದಾಗ ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಆದ್ದರಿಂದ ಪಂಚನಾಮೆ **ನಿಪಿ-2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸ್

ಸಿ.ಸಿ ನಂಃ 20418/2020

ಚಾಸಾಃ 1, ಪ್ರಾಸಾಃ 1

ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ವಸ್ತುವನ್ನು ಕೊಟ್ಟಿಲ್ಲ, ಪೊಲೀಸರು ಯಾವುದೇ ವಸ್ತುವನ್ನು ಜಪ್ತುಪಡಿಸಿಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ. ಅಕ್ಕಪಕ್ಕದ ಮನೆಯವರೊಂದಿಗೆ ಜಗಳ ಮಾಡಿದ್ದರಿಂದ ಪೊಲೀಸರು ಆರೋಪಿಯನ್ನು ಬಂಧಿಸಿರುತ್ತಾರೆ.

(ಈ ಹಂತದಲ್ಲಿ ಜಪ್ತುಪಡಿಸಿಕೊಂಡ ಮಾಲುಗಳನ್ನು ತನಿಖಾಧಿಕಾರಿ ಹಾಜರುಪಡಿಸದ ಕಾರಣ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)

ಮು. ಮ. ದಂ. ನ್ಯಾ ಬೆಂ. ನಗರ.